ದಿನಾಂಕಃ 16.06.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ಶ್ರೀ.ಎಸ್.ಎನ್.ಪಿ. ವಕೀಲರಿಂದ

ವಾದಿಗಳು ಪರಿಚಯ ಇದ್ದಾರಾ ಎಂದರೆ ಹೌದು. ದಾವಾ ಎ ಷೆಡ್ಯೂಲ್ ಸ್ವತ್ತಿನ ಯಾವ ಭಾಗಕ್ಕೆ ನನ್ನ ಜಮೀನು ಬಂದಿರುತ್ತದೆ ಎಂದರೆ ಪೂರ್ವಕ್ಕೆ. ವಾದಿಗಳಿಗೆ ಸರ್ವೆ ನಂಬರ್ 62/3 ರಲ್ಲಿ 2 ಎಕರೆ 2 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ 2 ಎಕರೆ 2 ಗುಂಟೆ ಜಮೀನನ್ನು ವಾದಿಗಳು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಅಳತೆ ಮಾಡಿಸಲು ದಿಃ 24.02.2020 ರಂದು ಅಳತೆ ಮಾಡುವುದಾಗಿ ನನಗೆ ಹಾಗೂ ಉಳಿದ ಪ್ರತಿವಾದಿಗಳಿಗೆ ನೋಟೀಸು ಬಂದಿತ್ತು ಎಂದರೆ ಸರಿಯಲ್ಲ. ಸರ್ವೆ ಇಲಾಖೆಯಿಂದ ರಿಜಿಸ್ಟಾರ್ ಪೋಸ್ಟ್ ಮೂಲಕ ನನಗೆ ಮತ್ತೊಂದು ನೋಟೀಸು ಬಂದಿತ್ತು ಎಂದರೆ ಸರಿಯಲ್ಲ.

ನಮ್ಮ ಜಮೀನಿನ ಸರ್ವೆ ನಂಬರ್ ಎಷ್ಟು ಎಂದರೆ ಸರ್ವೆ ನಂಬರ್ 62/4. ದಾವಾ ಸ್ವತ್ತಿನ ಸರ್ವೆ ಮಾಡುವ ಕಾಲದಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆ ಅರ್ಧ ಗುಂಟೆ ಹಾಗೂ 1.1/2 ಗುಂಟೆ ಎಂದು ಎರಡು ಭಾಗಗಳಲ್ಲಿ ನಾವು ಒತ್ತುವರಿ ಮಾಡಿರುತ್ತೇವೆ ಎಂದು ಸರ್ವೆಯಲ್ಲಿ ತಿಳಿದು ಬಂದಿರುತ್ತದೆ ಎಂದರೆ ಸಾಕ್ಷಿಯು ನಾನು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಒತ್ತುವರಿ ಆಗಿರುವ ಬಗ್ಗೆ ಸರ್ವೆ ಮೂಲಕ ಗೊತ್ತಾದ ನಂತರ ಸದರಿ ಸರ್ವೆಯನ್ನು ರದ್ದು ಮಾಡುವಂತೆ ಯಾವುದಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೀರಾ ಎಂದರೆ ಇಲ್ಲ. ದಾವಾ ಬಿ ಮತ್ತು ಸಿ ಷೆಡ್ಯೂಲ್ ಸ್ವತನ್ನು ನಾವು ಒತ್ತುವರಿ ಮಾಡಿದ್ದರಿಂದ ಸದರಿ ಸ್ವತ್ತುಗಳನ್ನು ವಾದಿಗಳಿಗೆ ನಾವು ಬಿಟ್ಟುಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ಅವರ ಜಮೀನಿನಲ್ಲಿ ನಾವು ಸ್ವಾಧೀನಾ ಇರುವುದು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರ್ 62/4 ರಲ್ಲಿ ನನಗೂ ಹಾಗೂ ಉಳಿದ ಪ್ರತಿವಾದಿಗಳಿಗೆ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು 2 ಎಕರೆ 31 ಗುಂಟೆ ಇರುತ್ತದೆ ಆದರೆ ಪಹಣಿ 2 ಎಕರೆ 18 ಗುಂಟೆ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ 2 ಎಕರೆ 31 ಗುಂಟೆ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನನ್ನು ವಾದಿಗಳಿಗೆ ಬಿಟ್ಟು ಕೊಡಬೇಕಾಗುತ್ತದೆ ಎಂದರೆ ಸಾಕ್ಷಿಯು ಅಲ್ಲಿ ಬೇರೆ ಜಮೀನು ಇಲ್ಲ ಎಂದು ನುಡಿಯುತ್ತಾರೆ. ದಾವಾ ಬಿ ಮತ್ತು ಸಿ ಷೆಡ್ಯೂಲ್ ಸ್ವತ್ತುಗಳಲ್ಲಿ ನಮಗೆ

ಯಾವುದೇ ಮಾಲೀಕತ್ವ ಹಾಗೂ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಿದ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ